ಪಿನ್ನೆಲೆಯು, ಮಾನವಗುಣದ ವಿವಿಧ ಬಗೆಗಳನ್ನು ಪ್ರತಿನಿಧಿಸುವ ಅನೇಕ ವ್ಯಕ್ತಿಗಳ ಪರಿಚಯವನ್ನು ನಮಗೆ ಮಾಡಿಕೊಡುತ್ತದೆ; ಹಾಗೂ ಆಯಾ ಗುಣಗಳ ಆಚರಣೆಯಿಂದ ಉಂಟಾಗುವ ಫಲವನ್ನೂ ನಮಗೆ ತಿಳಿಸಿಕೊಡುತ್ತದೆ.

ಮಹಾಭಾರತದ ಬಹು ಮುಖ್ಯ ಭಾಗವೆಂದರೆ ಭಗವದ್ಗೀತೆ. ಶ್ರೀಕೃಷ್ಣನು ಅರ್ಜುನನಿಗೆ ರಣರಂಗದಲ್ಲಿ ಮಾಡಿದ ಉಪದೇಶವೇ ಇದರ ವಸ್ತುವಿಷಯ. ಇದು ಹಿಂದೂ ಧರ್ಮದ ಪ್ರಸ್ಥಾನತ್ರಯಗಳಲ್ಲಿ ಒಂದು. ಸಂತರು, ರಾಜರು, ರಾಜಕಾರಣಿಗಳು, ವಾಣಿಜ್ಯೋದ್ಯಮಿಗಳು, ಸಾಮಾನ್ಯ ಜನರು – ಇವರೆಲ್ಲರಿಗೂ ಇದು 'ಕರ್ಮಯೋಗದ ಮಾರ್ಗದರ್ಶಿ' ಪುಸ್ತಕ. ಆಧುನಿಕ ಮನೋಶಾಸ್ತ್ರಜ್ಞರು ಮತ್ತು ಮ್ಯಾನೇಜ್‌ಮೆಂಟ್ ಪರಿಣತರೂ ಕೂಡ ಭಗವದ್ಗೀತೆಯನ್ನು ತಮ್ಮದೇ ಆದ ದೃಷ್ಟಿಕೋನದಿಂದ ಅಧ್ಯಯನ ಮಾಡುತ್ತಿದ್ದಾರೆ.

ಆಧ್ಯಾತ್ಮಿಕ ಸುಖ: ಆಧ್ಯಾತ್ಮಿಕ ಭಾವನೆಯನ್ನು ಬೆಳೆಸಿಕೊಳ್ಳಲು ಸುಲಭವಾದ ಮಾರ್ಗವೆಂದರೆ, ಅವತಾರ ಪುರುಷರ ಹಾಗೂ ಸಂತಮಹಾತ್ಮರ ಜೀವನ ಚರಿತ್ರೆಗಳು ಮತ್ತು ಸಂದೇಶಗಳನ್ನು ಅಧ್ಯಯನ ಮಾಡುವುದು. ಶಾಸ್ತ್ರಗ್ರಂಥಗಳ ನಿಯಮಿತ ಅಧ್ಯಯನ, ಧ್ಯಾನ, ಭಗವನ್ನಾಮ ಸ್ಮರಣೆ ಇವೆಲ್ಲ ಅತ್ಯಂತ ಶಕ್ತಿಯುತ ಸಾಧನಗಳು. ಇನ್ನೊಂದು ವಿಧಾನವೆಂದರೆ, ಮೂಲಭೂತ ಪ್ರಶ್ನೆಗಳಾದ "ನಾನು ಯಾರು?", "ಈ ವಿಶ್ವರಚನೆಯಲ್ಲಿ ನನ್ನ ಸ್ಥಾನಮಾನ ಏನು?", "ನಾನು ನಡೆಯುತ್ತಿರುವ ಮಾರ್ಗ ಯಾವುದು?", "ಮರಣವೆಂದರೆ ಏನು?" – ಇಂಥ ಮೂಲಭೂತವೂ ಸಂಕೀರ್ಣವೂ ಆದ ಪ್ರಶ್ನೆಗಳ ಮೇಲೆ ಚಿಂತಿಸುವುದು. "ತಿಳಿದುಕೊಳ್ಳಬೇಕು" ಎನ್ನುವ ನಮ್ಮ ಬಯಕೆಗೆ ಉನ್ನತ ಆಯಾಮವನ್ನು ನೀಡುತ್ತದೆ; ಅದಲ್ಲದೆ, "ಸುಖಾನುಭವವನ್ನು ಪಡೆಯಬೇಕು" ಎನ್ನುವ ನಮ್ಮ ಆಸೆಗಳ ತೀವ್ರತೆಯನ್ನು ಕಡಿಮೆ ಮಾಡುತ್ತದೆ.

ತೈತ್ತಿರೀಯ ಉಪನಿಷತ್ತು ಮಾನವನು ಪಡುವ ಆನಂದದ ಅತ್ಯುನ್ನತ ಹಂತದ ವಿವರವನ್ನು ಹೀಗೆ ಕೊಡುತ್ತದೆ:

> "ದೃಢಕಾಯನೂ, ಬಲಿಷ್ಠನೂ, ಸಂಪದ್ಭರಿತವಾದ ಇಡೀ ಭೂಮಿಯನ್ನೂ ಹೊಂದಿರುವ ಒಬ್ಬ ಒಳ್ಳೆಯ ಯುವಕನು ಇದ್ದಾನೆಂದುಕೊಳ್ಳೋಣ. ಅವನ ಆನಂದವು ಮನುಷ್ಯರ ಒಂದು ಆನಂದದ ಮಾಪನವಾಗುತ್ತದೆ." (ಬ್ರಹ್ಮಾನಂದ ವಲ್ಲೀ, ೮ ನೇ ಅನುವಾಕ.)

ನಂತರ ಉಪನಿಷತ್ತು, ಅನುಕ್ರಮವಾಗಿ ಸಂತೋಷದ ಉನ್ನತ ಹಂತಗಳನ್ನು ಪಟ್ಟಿಮಾಡುತ್ತ ಹೋಗುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಮನಸ್ಸಿನ ಪ್ರಶಾಂತತೆ ಮತ್ತು ನಿಸ್ಪೃಹತೆಯು ಅಧಿಕವಾದಂತೆಲ್ಲ, ಆನಂದದ ಮಾಪನವೂ ಸಾವಿರ ಪಟ್ಟು ಆಗುತ್ತಾ ಹೋಗುತ್ತದೆಯೆಂದು ಅದು ಹೇಳುತ್ತದೆ. ಹೀಗೆ ನಿಸ್ಪೃಹತೆಯೇ ಪರಿಪೂರ್ಣ ಆಧ್ಯಾತ್ಮಿಕ ಆನಂದವನ್ನು ಪಡೆಯುವ ಉತ್ಕೃಷ್ಟ ಸಾಧನವಾಗಿದೆ.

(ಮುಂದಿನ ತಿಂಗಳು: ತ್ಯಾಗ ಮತ್ತು ಸೇವೆಗಳನ್ನು ಅನುಷ್ಠಾನಗೊಳಿಸುವ ಇತರ ವಿಧಾನಗಳು) [ಕೃಪೆ: Parents and Teachers in Value Education, Publisher: Ramakrishna Mission, Belur Math]

## ಸ್ನೇಹಪ್ರಭ

**ಸಮಸ್ಯೆ: ಜೀವನದಲ್ಲಿ ಅನೇಕ ಬಗೆಯ ವಿಫಲತೆಗಳು ಆಗುತ್ತವೆ. ಅವುಗಳನ್ನು ಎದುರಿಸಲು ಮಾಡಿಕೊಳ್ಳಬೇಕಾದ ಸಿದ್ಧತೆಗಳು ಯಾವುವು? ವಿಫಲತೆಯ ಸಂದರ್ಭದಲ್ಲಿ ಇರಬೇಕಾದ ಸರಿಯಾದ ಮನೋಭಾವ ಯಾವುದು?**

**ಪರಿಹಾರ : ಜೀವನದಲ್ಲಿ ವಿಫಲತೆ ಎಂಬುದಿಲ್ಲ. ಯಾವುದನ್ನು ವಿಫಲತೆ, ಸೋಲು ಎಂದು ಕರೆಯುತ್ತೇವೆಯೋ ಅದು ತಾತ್ಕಾಲಿಕವಾದ ಒಂದು ತಡೆ. ಈ ತಡೆ ಹೆಚ್ಚಿನ ಪರಿಶ್ರಮವನ್ನೂ ತಾಳ್ಮೆಯನ್ನೂ ನಿರೀಕ್ಷಿಸುತ್ತದೆ. ಈ ತಡೆಯಿಂದ ಉಂಟಾಗುವ ಮಾನಸಿಕ ಖಿನ್ನತೆ, ಹತಾಶೆ, ಸೋಲಿನ ಮನೋಭಾವ –ಇವನ್ನೇ ಸೋಲು ಎಂದು ಪರಿಗಣಿಸಬಹುದೇ ಹೊರತು ತಡೆಗಳನ್ನೇ ಸೋಲು ಎಂದು ಗಣಿಸಬಾರದು. ವಿದ್ಯಾರ್ಥಿಯೊಬ್ಬನು ಪರೀಕ್ಷೆಯಲ್ಲಿ ಫೇಲಾದರೆ ಅವನು ಪಡೆದ ಜ್ಞಾನವೇನೂ ಕಡಮೆಯಾಗುವುದಿಲ್ಲ, ಪಾಸಾದರೆ ಜಾಸ್ತಿಯಾಗುವುದೂ ಇಲ್ಲ. ಸೋಲು, ಜಯ ಎನ್ನುವುದು ನಾವು ಯಾವುದನ್ನು ಗುರಿಯಾಗಿಟ್ಟುಕೊಳ್ಳುತ್ತೇವೆ ಎಂಬುದನ್ನು ಅವಲಂಬಿಸಿರುತ್ತದೆ. ಪರೀಕ್ಷೆಯಲ್ಲಿ ಪಾಸಾಗುವುದೇ ಗುರಿಯಾದಾಗ ಫೇಲಾಗುವುದು ವಿಫಲತೆ ಎನಿಸಬಹುದು. ಜ್ಞಾನಾರ್ಜನೆಯೇ ಅಧ್ಯಯನದ ಗುರಿಯಾದರೆ, ನಮ್ಮ ಪರಿಶ್ರಮಕ್ಕೆ ತಕ್ಕಂತೆ ಪ್ರತಿಫಲ ದೊರೆತೇ ದೊರೆಯುತ್ತದೆ; ಅಲ್ಲಿ ಸೋಲೆಂಬುದೇ ಇಲ್ಲ.**

**ವಿಫಲತೆ ಸಫಲತೆಗಳೆರಡೂ ನಮ್ಮ ಅಂತರಂಗ ಜೀವನವನ್ನು ಅವಲಂಬಿಸಿರುತ್ತದೆ. ನಾವು ಸಫಲತೆಯನ್ನು ನಮ್ಮ ಅಂತರಂಗದಲ್ಲಿ ಕಾಣಬೇಕು. ನೈತಿಕ ಪರಿಪೂರ್ಣತೆಯ, ಪರಹಿತಾಸಕ್ತಿಯ ಮತ್ತು ಆಧ್ಯಾತ್ಮಿಕ ಮನೋಭಾವದ ತುಂಬು ಜೀವನವನ್ನು ನಡೆಸಿದರೆ ಅದು ಸಾರ್ಥಕತೆಯ ಭಾವವನ್ನು ನೀಡುತ್ತದೆ. ಆಗ ಹೊರಗಿನ ವಿಫಲತೆಗಳಾವುವೂ ನಮ್ಮನ್ನು ವಿಚಲಿತರನ್ನಾಗಿಸುವುದಿಲ್ಲ. ಅವೆಲ್ಲ ಅತ್ಯಂತ ಸಾಮಾನ್ಯವಾಗಿ ಪರಿಣಮಿಸುತ್ತವೆ. ನಾವು ಜಯಕ್ಕೆ ಹೆಚ್ಚು ಒತ್ತನ್ನು ನೀಡಿದಾಗ ಸೋಲು ನಮಗೆ ಅಸಹನೀಯವಾಗುವುದು. ನಾವು ಆಧ್ಯಾತ್ಮಿಕ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಜಯಾಪಜಯಗಳನ್ನು ನಿರ್ಲಿಪ್ತ ಮನೋಭಾವದಿಂದ ನೋಡಲು ಸಾಧ್ಯವಾಗುತ್ತದೆ.**

**ಯಾವಾಗಲೂ ಸೋಲನ್ನು ನಿರೀಕ್ಷಿಸುವ ಮನೋಭಾವದವರಿರುತ್ತಾರೆ. ಅವರ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ. ಲಾಂಗ್ ಜಂಪ್ ಅಥವಾ ಹೈಜಂಪ್ ಮಾಡುವವನು ನನಗೆ ಹಾರಲಾಗುವುದಿಲ್ಲವೇನೋ ಎಂಬ ಸಂಶಯದಿಂದ ಓಡಿದರೆ, ಆ ಸಂಶಯವೇ ಹಾರುವುದಕ್ಕೆ ತಡೆಯಾಗುತ್ತದೆ. ಆದ್ದರಿಂದ ತುಂಬು ಆತ್ಮವಿಶ್ವಾಸ ಇರಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಹೋರಾಟಗಳನ್ನು ಮತ್ತು ತಪ್ಪುಗಳನ್ನು ಲೆಕ್ಕಿಸಬೇಡಿ. ಸೋಲುವುದು, ಸ್ವಲ್ಪ ಹಿಂದೆ ಜಾರುವುದು, ಇವನ್ನು ನೀವು ಗಮನಿಸಬೇಕಾಗಿಲ್ಲ. ಸಾವಿರ ವೇಳೆ ಆದರ್ಶವನ್ನು ಹಿಡಿದುಕೊಳ್ಳಿ. ಸಾವಿರ ಸಲ ಸೋತರೂ ಮತ್ತೊಮ್ಮೆ ಪ್ರಯತ್ನಿಸಿ."**

**ಜಪಾನಿನ ಸೇನಾಧಿಪತಿ ನಬುನಾಗ ಶತ್ರುಗಳ ಮೇಲೆ ಧಾಳಿ ಇಡಬೇಕಿತ್ತು. ಆದರೆ ಶತ್ರುಸೈನಿಕರು ಇವನ ಕಡೆಯ ಸೈನಿಕರಿಗಿಂತ ಹತ್ತು ಪಟ್ಟು ಇದ್ದರು. ಆದರೂ ತಮಗೆ ಜಯ ಎಂಬ ಭರವಸೆ ಅವನಿಗಿತ್ತು. ಅವನ ಸೈನಿಕರಿಗೆ ಮಾತ್ರ ಭಯ. ಯುದ್ಧಕ್ಕೆ ಹೋಗುವ ದಾರಿಯಲ್ಲಿ ಅವರು ಒಂದು ಶಿಂಟೋ ದೇವಾಲಯಕ್ಕೆ ಹೋದರು. ದೇವರಿಗೆ ಪ್ರಾರ್ಥನೆಯನ್ನು ಸಲ್ಲಿಸಿ ಹೊರಗೆ ಬಂದ ಮೇಲೆ ನಬುನಾಗನು ಸೈನಿಕರನ್ನು ಉದ್ದೇಶಿಸಿ ಹೇಳಿದ: "ನಾನು ಈಗ ಒಂದು ನಾಣ್ಯವನ್ನು ಮೇಲೆ ಹಾರಿಸುತ್ತೇನೆ. ಅದರ ತಲೆ ಮೇಲಾದರೆ ನಮಗೆ ಜಯ, ಬಾಲ ಮೇಲಾದರೆ ನಮಗೆ ಸೋಲು. ನಮ್ಮ ಅದೃಷ್ಟ ವೇನೆಂಬುದನ್ನು ಈಗ ನೋಡೋಣ." ಅವನು ನಾಣ್ಯವನ್ನು ಹಾರಿಸಿದನು. ಅದು ತಲೆ ಮೇಲಾಗಿ ಕೆಳಗೆ ಬಿತ್ತು. ಸೈನಿಕರು ಈಗ ಪರಮೋತ್ಸಾಹದಿಂದ ತುಂಬಿತುಳುಕಿದರು. ಮುಂದೆ ಅವರು ವೀರಾವೇಶದಿಂದ ಹೋರಾಡಿ, ಶತ್ರುಸೈನ್ಯವನ್ನು ನಿರ್ನಾಮ ಮಾಡಿದರು. ಮರುದಿನ ಗೊತ್ತಾಯಿತು, ನಬುನಾಗ ಹಾರಿಸಿದ ನಾಣ್ಯ ಎರಡೂ ಕಡೆ ತಲೆಯುಳ್ಳದ್ದಾಗಿತ್ತು. ಆತ್ಮವಿಶ್ವಾಸವೇ ಜಯದ ಸಾಧನೆ. (ಬರಹ: ಸ್ವಾಮಿ ನಿತ್ಯಸ್ಥಾನಂದ)**